Doc-382
T.P-2

51st Year of Publication ★ SATYAVADI Daily, MYSORE 4

Reg No B G 155 12-8-1968

ಮುಖ್ಯ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಏ. ಎಸ್. ಕೃಷ್ಣರಾವ್ [2 ಪೈಸೆ

ರೈಲೆ ಆಕಸ್ಮಿಕಗಳು 1194

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೇಸಿನವರು, ಪದ್ಮಭೂಷಣ ಸೇಠ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಪೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ : 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಅಮೃತ ಬಜಾರ್ ಪತ್ರಿಕೆ

ಕಲ್ಕತ್ತಾದ ಅಮೃತ ಬಜಾರ್ ಪತ್ರಿಕೆ ಶತಮಾನೋತ್ಸವವು ನಾಲ್ಕು ದಿನಗಳ ವೈಭವದಿಂದ ನೆರವೇರಿತು, ದೇಶದ ಅನೇಕ ಸ್ಥಳಗಳಲ್ಲಿ ಶತಮಾನೋತ್ಸವ ನೆರವೇರಿಸಲಾಯಿತು. ಒಂದು ಸಂಸ್ಥಾರವೆ ಪತ್ರಿಕೆಯಾಗಿ ನಡೆಯುತ್ತಿರುವ ಈ ಪತ್ರಿಕೆ ಸಂಪಾದಕ ಶ್ರೀ ತುಷಾರ ಕಾಂತಿ ಘೋಷ ಗೆ 69 ವರ್ಷ ವಯಸ್ಸಾಗಿದೆ.

ಸಿ ಎಸ್ ಐ ಆರ್ ರಜತಮಹೋತ್ಸವ

ಮೈಸೂರು— ಸಿ.ಎಸ್ ಐ ಆರ್ ರಜತಮಹೋತ್ಸವವು ನಿ.ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ನೆರವೇರಿತು — ಗೌರ್ನರ್ ಪಕ್ಕರವರು ಭಾಷಣ ಮಾಡಿದರು — ವೈಸ್‌ಛಾನ್ಸಲರ್ ಡಾ|| ಶ್ರೀಮಾಲಿಯವರು ಅಧ್ಯಕ್ಷತೆ ವಹಿಸಿದ್ದರು — ಡೈರೆಕ್ಟರ್ ಡಾ || ಪರ್ಪಿಯಾರವರು ಸ್ವಾಗತ ಭಾಷಣ ಮಾಡಿದರು.

★

ಸನ್ಮಾನ ಸಮಾರಂಭ

ಮೈಸೂರು— ನಿನ್ನೆ ಸಂಜೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು, ಮಾನ್ಯ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು, ಪೌರಾಡಳಿತ ಸಚಿವ ಶ್ರೀ ಪುಟ್ಟಸ್ವಾಮಿಯವರು, ವ್ಯವಸಾಯ ಸಚಿವ ಶ್ರೀ ರಾಚಯ್ಯನವರು, ಕೈಗಾರಿಕಾ ಸಚಿವ ರಾಜಶೇಖರಮೂರ್ತಿಯವರು, ಇತರರುಗಳ ಗೌರವಾರ್ಥವಾಗಿ ಮೈಸೂರು ನಾಗರೀಕರ ಪರ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಶ್ರೀ ನಿಜಲಿಂಗಪ್ಪನವರು ಬಂದಿರಲಿಲ್ಲ. ಮುಖ್ಯ ಮಂತ್ರಿಗಳಿಗೂ, ಸಚಿವರುಗಳಿಗೂ, ಚಿನ್ನವತ್ತಳೆಗಳೂ, ಬೆಳ್ಳಿ ಕ್ಯಾಸ್ಕೆಟ್‌ಗಳೂ ಅರ್ಪಿಸಲಾಯಿತು ; ಅತಿಥಿಗಳು ಸಮಯೋಚಿತ ಉತ್ತರವಿತ್ತ ಈ ಸಂಬಂಧವಾಗಿ ನಿನ್ನೆ ರಾತ್ರಿ ಭೋಜನ ಕೂಟವೂ ಏರ್ಪಡಿಸಲಾಗಿತು.

★

ಕಮ್ಯೂನಿಸ್ಟರ ದೃಷ್ಟಿ ಕೋಣ

ಜಯಪುರ— ಕಾಶ್ಮೀರ, ನಾಗಾ, ವಿಯೋ ಸಮಸ್ಯೆಗಳು, (ಅಲ್ಪಿಯರಕ್ಷಣೆ ಮತ್ತು ವಿದೇಶ ವಿಚಾರ ಬಿಟ್ಟು) ಪೂರ್ಣ ಸ್ವಾತಂತ್ರ್ಯ ಕೊಡುವುವರಿಂದ ಪರಿಹಾರವಾಗುವವೆಂದು ಭಾರತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಸುಂದರಯ್ಯ ಹೇಳಿದರು.

ಷೇಕ್ ಅಬ್ದುಲ್ಲರು ಕೊಟ್ಟಿರುವ ಕಪಿ

ಶ್ರೀನಗರ— ಆಗಸ್ಟ್ 18 ರಂದು ಪ್ರಾರಂಭವಾಗಲಿರುವ ಶಾಸನಸಭಾ ಉಪಚುನಾವಣೆಯನ್ನು ಬಹಿಷ್ಕರಿಸಬೇಕೆಂದು ಷೇಕ್ ಅಬ್ದುಲ್ಲರು ಕರೆಕೊಟ್ಟಿರುವುದು ನ್ಯಾಯ ರೀತ್ಯಾ ಅಪರಾಧವೆಂದು ಕಾಶ್ಮೀರ ಮುಖ್ಯ ಮಂತ್ರಿ ಸಿದ್ದೀಕ್ ಹೇಳಿದರು.

★

ರೈಲ್ವೇ ಆಕಸ್ಮಿಕಗಳು

ನವದೆಹಲಿ— ಭಾರತದ ರೈಲ್ವೇಗಳಲ್ಲಿ 1967 ಮಾರ್ಚ್ 1 ರಿಂದ 1968 ಮಾರ್ಚ್ 31 ರವರೆಗೆ ಡೈಲುಗಳ ಡಿಕ್ಕಿ, ಕಂಬಿ ತಪ್ಪುವುದು, ವಿನಾಶ ಕಾರ್ಯಗಳು ಮೊದಲಾದವುಗಳಿಂದ 1194 ಆಕಸ್ಮಿಕಗಳು ಸಂಭವಿಸಿದವು — 234 ಮಂದಿ ಸತ್ತು 1045 ಮಂದಿ ಗಾಯಗೊಂಡರು — ರೂ. 1 59 ಕೋಟಿ ಬೆಲೆಯ ರೈಲ್ವೇ ಆಸ್ತಿ ನಷ್ಟ ಗೊಂಡಿತು.

★

ಸ್ವಾತಂತ್ರ್ಯ ದಿನೋತ್ಸವ

ಮೈಸೂರು— ತಾ|| 15 ರಂದು ಪುರ ಸಭೆ ಆಶ್ರಯದಲ್ಲಿ ಟೌನ್‌ಹಾಲಿನಲ್ಲಿ ಸ್ವಾತಂತ್ರ್ಯ ದಿನೋತ್ಸವವು ನಡೆಯುವುದು : ಕಾಂಗಾರಿ ಮಂತ್ರಿ ಶ್ರೀ ಲಕ್ಕಪ್ಪನವರು ಧ್ವಜಾರೋಹಣ ಮಾಡುವರು.

●

ಅಗಹುನ

ಅಮೇರಿಕಾದ ಕೊಲ್ಲಪ್ಪಟ್ಟ ನೀಗ್ರೋ ನಾಯಕ ಮಾರ್ಟಿನ್ ಲೂಥರ್ ಕಿಂಗ್‌ರ ಸತಿಯವರು ಭಾರತಕ್ಕೆ ನವೆಂಬರಿನಲ್ಲಿ ಭೇಟಿಯನ್ನು ಕೊಡುವ ಸಂಭವವಿದೆ.

○ ರಾಜಾಸ್ಥಾನದಲ್ಲಿ ಕಳೆದ ತಿಂಗಳ ಪ್ರವಾಹದ ಹಾವಳಿಯಿಂದ ರೂ. 15 ಕೋಟಿಯಿಂದ 20 ಕೋಟಿ ವರಿಗೆ ನಷ್ಟವಾಗಿರುವ ಅಂದಾಜಿದೆ.

ರೈಲ್ವೇಯವರ ಮುಷ್ಕರವೇ

ಪಾಟ್ನಾ— ಜುಲೈ ಕಡೆಯಲ್ಲಿ ತೆಗೆದು ಕೊಳ್ಳಲಾದ ಮತ ಸಂಗ್ರಹದ ರೀತ್ಯಾ ಅಖಿಲ ಭಾರತ ರೈಲ್ವೇ ಸಂಘವು ಡಿಸೆಂಬರು ಕಡೇ ವಾರದಲ್ಲಿ ದೇಶಾದ್ಯಂತ ಮುಷ್ಕರ ಹೂಡಲು ಯೋಚಿಸಿದೆ.

★

ಸರ್ಕಾರದ ಸಾಲ

ಮೈಸೂರು ಸರ್ಕಾರ ಒಂದು ಹೊಸ ಸಾಲವನ್ನು ಬಹಿರಂಗ ಪೂಕುಕಟ್ಟಿಯಲ್ಲಿ ಎತ್ತುವುದಾಗಿಯೂ, ಈ ವಿವರ ಈ ತಿಂಗಳು ಕಡೆಯೊಳಗೆ ಪ್ರಕಟವಾಗುವುದೆಂದೂ ವರದಿಯಾಗಿದೆ.

★

ನೀರಿನ ಹಾವಳಿ

ಶಿವಮೊಗ್ಗಾ— ಶರಾವತಿ ನದಿಯು ಪೂರ್ಣ ಪ್ರವಾಹದಲ್ಲಿದೆ — ನಗರದ ಹತ್ತಿರ ಒಂದು ಅಕ್ಕೆ ಗಿರಣಿ ನೀರಿನಿಂದ ಸುತ್ತಲ್ಪಟ್ಟಿದೆ — ನೀರಿನ ಹಾವಳಿಯಿಂದ ಹೊರಬಿದ್ದಿರುವ ವನ್ಯಜೀವಿಗಳು ಮತ್ತು ಹಾವುಗಳ ಕಾಡ ಜನರಿಗೊದಗಿದೆ.

★

ಭೀಕರ ನೆರೆಹಾವಳಿ

ಅಹಮದಾಬಾದು— ದಕ್ಷಿಣ ಗುಜರಾತಿನಲ್ಲಿ ತಪತಿ, ನರ್ಮದ, ಮತ್ತಿತರ ನದಿಗಳ ಭೀಕರ ನೆರೆಹಾವಳಿಯಿಂದ ಸಾವಿರ ಜನರು ಸತ್ತಿರುವಡಾಗಿ ವರದಿಯಾಗಿವೆ.

★

ದೇವಾಲಯದ ಆದಾಯ

ತಿರುಪತಿ— ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯಕ್ಕೆ ರೂ. 176·086-61 ಜುಲೈ ತಿಂಗಳ ಆದಾಯ.

●

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಉಪನ್ಯಾಸಗಳನ್ನು ಕೇಳುವವರೆಗೆ ಉತ್ಸಾಹದಿಂದ ಕೇಳುತ್ತಿರುತ್ತಾರೆ. ನಂತರ ತಲೆ ಕೊಡವಿ ಎದ್ದು ಹೊರಟರೆಂದರೆ ಹಿಂದಿನ ಸ್ಥಿತಿಯನ್ನೇ ಹೊಂದುತ್ತಾರೆ. ಧಾರ್ಮಿಕ ಪುಸ್ತಕ ಹಂಚುವುದರಿಂದ ಅವರಲ್ಲಿ ಆಸಕ್ತಿ ಇರುವವರು ಓದುತ್ತಾರೆ. ಅದರಿಂದ ಸಾಕಷ್ಟು ಪರಿಣಾಮ ಉಂಟಾಗುತ್ತದೆ. ಆದರೆ ಬಹಳ ಜನರು ಅಂಥಾ ಪುಸ್ತಕಗಳನ್ನು ಓದುವುದಕ್ಕೇ ಪ್ರಯತ್ನಿಸುವುದಿಲ್ಲ. ಆದುದರಿಂದ ಧಾರ್ಮಿಕ ಸಂಸ್ಥೆ ಮುಂತಾದವು ಆಸಕ್ತಿ ವಹಿಸಿ ಜನರಿಗೆ ಧರ್ಮದ-ಬಗ್ಗೆ ಉತ್ಸಾಹ ಹುಟ್ಟಿಸಬೇಕಾಗಿದೆ.

ಶ್ರೀ ರಾಮೋತ್ಸವ ಸಂಘಗಳು ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ಉತ್ಸವ ಆಚರಿಸುವುದರ ಜೊತೆಗೆ, ಪ್ರತಿನಿತ್ಯವೂ ರಾಮಾಷ್ಟೋತ್ತರ ಪಾರಾಯಣ, ಸಂಜೆ ವೇಳೆ ಉಪನ್ಯಾಸಗಳನ್ನು ಏರ್ಪಡಿಸುವುದು, ಸಾಧ್ಯವಾದಷ್ಟು ಜನ ಬಾಲಕರಿಗೆ ಶ್ರೀಮದ್ರಾಮಾಯಣವನ್ನು ಪಾಠ ಹೇಳಿಸುವುದು, ಅದನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಆಚಾರಗಳನ್ನು ತಪ್ಪದೇ ನಡೆಸಬೇಕೆಂಬ ನಿಯಮ ಏರ್ಪಡಿಸುವುದು, ಅಂಥವರಿಗೆ ಉಚಿತ ಊಟದ ಏರ್ಪಾಡನ್ನು ಮಾಡುವುದು, ಮುಂತಾದ ಕ್ರಮಗಳಿಂದ ಹೆಚ್ಚಿನ ಪ್ರಯೋಜನವಾಗಬಹುದು.

ದೇಶಾದ್ಯಂತ ವಿದ್ಯಾರ್ಥಿಗಳಿಗೆ ಉಚಿತ ವಸತಿಗಳನ್ನು ನೀಡುವ ವಿದ್ಯಾರ್ಥಿನಿಲಯಗಳಿವೆ. ಅವುಗಳ ಮೇಲ್ವಿಚಾರಕರು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ವರ್ಣಾಶ್ರಮ ಧರ್ಮ ಆಚಾರಗ್ರಂಥಗಳನ್ನು ತಪ್ಪದೇ ಪಾಲಿಸಬೇಕೆಂಬ ನಿಯಮವನ್ನು ಮಾಡುವುದು : ದ್ವಿಜರ ವಿದ್ಯಾರ್ಥಿನಿಲಯದಲ್ಲಿ ಎರಡು ಕಾಲ ತಪ್ಪದೆ ಸಂಧ್ಯಾವಂದನೆ ನಡೆಯಲೇಬೇಕೆಂಬ ನಿಯಮ ಏರ್ಪಡಿಸುವುದು : ಬೆಳಿಗ್ಗೆ ಅರ್ಧ ಗಂಟೆ ಕಾಲ ಪ್ರತಿಯೊಬ್ಬ ವಿದ್ಯಾರ್ಥಿಯೂ ವೇದಮಾತೆ ಗಾಯತ್ರಿಯನ್ನು ಕಲಿಸಿಕೊಳ್ಳಲೇಬೇಕೆಂಬ ಕಡ್ಡಾಯ ಮಾಡುವುದು; ಶಿಖೆಯನ್ನು ಬಿಟ್ಟಿರುವ, ಪುಂಡ್ರಗಳನ್ನು ತಪ್ಪದೇ ಧರಿಸುವ, ಇತರ ಆಚಾರಗ್ರಂಥಗಳನ್ನು ಪಾಲಿಸುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಉಚಿತ ವಸತಿಗಳಿಗೆ ಏರ್ಪಡಿಸುವುದು, ಮುಂತಾದ ಕ್ರಮಗಳನ್ನು ತೆಗೆದುಕೊಳ್ಳಬಹುದು.

Quality Printi g — Neat Binding
Lakshminarasimha Press
Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited withgrateful thanks.

Editor, 'Satyavadi' Chamarajapuram, Mysore 4.

ಆಕರ್ಷಕ ಎಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್ ಬೆಂಗಳೂರು
ಎಲ್ಲ ವಿಧದ ಆಯುರ್ವೇದ ಔಷಧಗಳಿಗಾಗಿ ಹೊರಡಿಸಿರಿ

ಪುಡ್‌ಲಾಂಡ್ 9-8-68 ರಿಂದ
ಆಕರ್ಷಣೆ ಸ್ವಾರಂಭ
— ಮನಮೋಹಕ ಹಿಂದಿ ಚಿತ್ರ —
ಫಜ್ರ್
ಈಸ್ಟ್‌ಮನ್ ಕಲರ್
ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ,
ಮುಕ್ರಿ, ಅಗಾ ಮುಂತಾದವರು
ಸಂಗೀತ —
ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— ಜನವರಿಯಲ್ಲಿ 6 ನೇ ವಾರ
ಚಿತ್ರಾಕರ್ಷ ಕನ್ನಡ ಚಿತ್ರ
ನಮ್ಮ ಊರು
ಪಾತ್ರ : ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana
ಗೋರಕ್ಷಣೆಗೆ ಬೆಂಬಲ ನೀಡಿ
ಶ್ರೀದ್ವಾರಕಾ ಜಗದ್ಗುರು ಮಹಾಸಾನ್ನಿಧ್ಯಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಉಪದೇಶ ಅನುಗ್ರಹ ಕೃಪೆಯಾಗಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ ಪತ್ರಿಕೆಯದೆ. ಶಾಖಾಹಾರ, ಪಶುವೈದ್ಯ, ಆಚಾರಗಳ ಏಕೈಕ ಪ್ರಚಾರ ಪರಾಸಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ
— ಗೋರಕ್ಷಣೆ ವ್ಯವಸ್ಥಾಪಕರು ವಿನಂತಿ —
ಗೋರಕ್ಷಣೆಗೆ ಟೀಕುಸಗಳನ್ನಾಗಲೀ ತಮ್ಮಿಂದ ಧನವನ್ನೂ ವರದಸಹಿಪೂರ್ವಕವಾಗಿ ಸ್ವೀಕರಿಸಲಾಗುವುದು
ಚಂದಾವಾಸುದೇಕಳಿದಿರುವವರು ಇವರಿಂದ ಚಂದಾ ಪಾವತಿಮಾಡಬೇಕಾಗಿ ವಿನಂತಿ
ಡಾ|| ಪಿ. ಜೆ. ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ. ಜಿ. ಶಾಸ್ತ್ರಿಗಳು, 1080 ಪಿಡಬ್ಲ್ಯೂಡಿ ಕ್ವಾರ್ಟರ್ಸ್, ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣಾ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಕೂಡಲೇ ಮಾಂಸ ರಫ್ತಿಗಾಗಿ ಜಾನುವಾರುಗಳು ಹತ್ಯೆ ಆಗುವುದು ನಿಲ್ಲಬೇಕು

Edited, Printed & Published by Dharmapracharu Nirata M S Krishna Rao (Proprietor) at the Satyavadi Press Chamarajapuram, Mysore-4